ಐ.ಎ.ಎಸ್ ಹಾಗೂ ಐ.ಪಿ.ಎಸ್ ಅಧಿಕಾರಿಗಳ ಆದಾಯದ ಬಗ್ಗೆ

3198 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೆಲವು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ತಮ್ಮ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಹೆಸರುಗಳೇನು?

ಇ) ಎಷ್ಟು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಲೋಕಾಯುಕ್ತ ವಿಚಾರಣೆಯನ್ನು ಎದುರಿಸುತ್ತಿದ್ದಾರೆ.

ಈ) ಈ ಪ್ರಕರಣಗಳನ್ನು ಎಂದು ಲೋಕಾಯುಕ್ತಕ್ಕೆ ವಹಿಸಲಾಯಿತು ಮತ್ತು ಅವುಗಳು ಎಂದು ಮುಕ್ತಾಯಗೊಳ್ಳುತ್ತವೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) :

ಅ) ಲೋಕಾಯುಕ್ತದ ಪೋಲೀಸ್ ವಿಭಾಗವು, ಕೆಲವು ಅಧಿಕಾರಿಗಳು ತಮ್ಮ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂಬುದರ ಆರೋಪಗಳ ಮೇಲೆ ತನಿಖೆ ಮಾಡಿದ್ದು; ಮಾಡಲಾಗುತ್ತಿದ್ದು ಎರಡು ಪ್ರಕರಣಗಳಲ್ಲಿ ವರದಿ ಬಂದಿದೆ. ಒಂದು ಪ್ರಕರಣದಲ್ಲಿ ಆರೋಪ ಸಾಬೀತಾಗಿಲ್ಲವೆಂದು ಇನ್ನೊಂದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಯಾರೂ ಇಲ್ಲ, ಆದರೆ ಮೇಲಿನ 'ಅ' ದಲ್ಲಿ ಹೇಳಿದಂತೆ ತನಿಖೆ ನಡೆಯುತ್ತಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆ ಏನೆಂದರೆ, "Whether the Government is aware that some IAS and IPS officers have assets disproportionate to their sources of income?"

The answer is :

"Police wing of Lokayukta have invistigated/ are investigating on the suspicion that some of the Officers have acquired property, disproportionate to their known sources of income. Two final reports have been received, and in one case charges are not proved and another is under examination by Government.

My second question is :

"If so, name of such officers".

The Answer is :

"Does not arise"

My next question : "The number of IAS and IPS officers who are facing enquiry by the Lokayukta;"

The answer is : "None".

ಬಹಳ ಸಂತೋಷ. ಯಾವುದೇ ರೀತಿಯಲ್ಲೂ ಕೂಡ ಯಾವುದೇ ತರಹದ ಎನ್‌ಕ್ವೈರಿ ಇಲ್ಲದೆ ಇರತಕ್ಕ ಅಧಿಕಾರಿಗಳು ನಮ್ಮ ರಾಜ್ಯದಲ್ಲಿದ್ದಾರೆಂದರೆ ನನಗೂ ಹೆಮ್ಮೆಯೆನಿಸುತ್ತದೆ. ನಮ್ಮಲ್ಲಿ ಶೇಕಡ 80ರಷ್ಟು ಮಂದಿ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆಂದು ನಾನು ಎದೆಗಾರಿಕೆಯಿಂದ ಹೇಳಬೇಕಾಗುತ್ತದೆ. ಆದರೆ ಈಗ ನೀವು ಕೊಟ್ಟಿರತಕ್ಕ ಉತ್ತರದ ಅರ್ಥ ಏನು ಬರುತ್ತದೆಂದರೆ, ಈ ರಾಜ್ಯದಲ್ಲಿ ಯಾರೂ ಕೂಡ ಕರಪ್ಟ್ ಅಧಿಕಾರಿಗಳು ಇಲ್ಲವೆಂಬ ಭಾವನೆ ಬರತಕ್ಕ ಧಾಟಿಯಲ್ಲಿ ಉತ್ತರ ಇದೆ. ಅದಕ್ಕೋಸ್ಕರ ಕೇಳಬೇಕಾಗುತ್ತದೆ, ಇವತ್ತು ಲೋಕಾಯುಕ್ತ ಏನಿದೆ, ಅದನ್ನು ಬಿಳಿಯ ಆನೆ ಎಂದು ಶ್ರೀ ವಾಟಾಳ್ ನಾಗರಾಜ್ ಅವರು ಹೇಳುತ್ತಿದ್ದರು. ನನಗೂ ಅದು ಬಿಳಿಯ ಆನೆ ಅನ್ನಿಸುತ್ತಿದೆ. ಇವತ್ತು ಏನು ಒಂದು ಗುಮಾನಿ ಇರತಕ್ಕದ್ದು ಅಂದರೆ ಡಾ: ಮಲಕರೆಡ್ಡಿಯವರಿಗೆ ಉತ್ತರ ಕೊಡುವಾಗ ಸರಿಯಾಗಿ ಕೊಡಲಿಲ್ಲ. ಅವರ ಸೋರ್ಸಸ್ ಆಫ್ ಇನ್‌ಕಂ ಏನು ಎಂದು ಡಿಕ್ಲೇರ್ ಮಾಡುವುದು ಬೇರೆ. ಉದಾಹರಣೆಗೆ ಕಟ್ಟಿರತಕ್ಕತ್ತ ಮನೆಗಳಲ್ಲಿ ಅವನ್ನು ಯಾವ ಸೋರ್ಸ್‌ನಿಂದ ಕಟ್ಟಿರುತ್ತಾರೆ ಎಂಬುದನ್ನು ತನಿಖೆ ಮಾಡಿಸಿದರೆ ಮತ್ತು ಆ ಮನೆಗಳನ್ನು ವ್ಯಾಲ್ಯು ಮಾಡಿಸಿದರೆ ನಿಜಾಂಶ ಗೊತ್ತಾಗುತ್ತದೆ. ಅವರೆ ಸೋರ್ಸಸ್ ಆಫ್ ಇನ್‌ಕಂ ಏನು ಮತ್ತು ಹಾಕಿರತಕ್ಕ ಬಂಡವಾಳ ಎಷ್ಟು ಎಂಬುದು ಗೊತ್ತಾಗುತ್ತದೆ. ಇವೊತ್ತು ಈ ನಗರದಲ್ಲಿರತಕ್ಕ ದೊಡ್ಡ ದೊಡ್ಡ ಹೋಟಲ್‌ಗಳಲ್ಲಿರತಕ್ಕ ಮತ್ತು ಕೈಗಾರಿಕೆಗಳಲ್ಲಿರತಕ್ಕ ಕಪ್ಪು ಹಣ ಈ ಅಧಿಕಾರಿಗಳ ಕೈಯಲ್ಲಿರತಕ್ಕ ಕಪ್ಪು ಹಣ ಎಂದು ಎಲ್ಲರಿಗೂ ಗೊತ್ತಿರತಕ್ಕದ್ದು. ಇದು ರಾಜ್ಯದ ಜನರಿಗೆ ಗೊತ್ತು. ಈಗ ನಾನು ಕೇಳುವುದು ಎರಡು ಪ್ರಕರಣಗಳಲ್ಲಿ ವರದಿ ಬಂದಿದೆ ಎಂದು ಹೇಳಿದ್ದೀರಿ. ಅದು ಏನು ರಿಪೋರ್ಟ್ ಮತ್ತು ಯಾರ ಮೇಲೆ ಸಾಬೀತಾಗಿದೆ. ಯಾರು ನಿರ್ದೋಷಿಗಳಾಗಿದ್ದಾರೆ? ಆ ಅಧಿಕಾರಿಗಳ ಹೆಸರು ಹೇಳತಕ್ಕ ಎದೆಗಾರಿಕೆ ಸರ್ಕಾರಕ್ಕೆ ಇರಬೇಕು. ಪ್ರೊ. ನಂಜುಂಡಸ್ವಾಮಿಯವರ ಪ್ರಶ್ನೆ ಬಂದಾಗ ಅವರ ಹೆಸರು ಹೇಳುವುದಕ್ಕೆ ನಿಮಗೆ ಪುಕ್ಕಲೇ ಅಂದರು. ನಾವು ಅವರನ್ನು ಮೆಟ್ಟಿ ನಿಲ್ಲಬೇಕಾಗುತ್ತದೆ, ಹೆಸರು ಹೇಳಬೇಕಾಗುತ್ತದೆ. ಮುಖ್ಯ ಮಂತ್ರಿಗಳಾಗಿರತಕ್ಕ ತಾವು ಹೆಸರು ಹೇಳಬೇಕಾಗುತ್ತದೆ. ಇವತ್ತು ನೀವು ಮುಖ್ಯ ಮಂತ್ರಿಗಳಾಗಿದ್ದೀರಿ. ನಿಮ್ಮ ನಂತರ ನಿಮ್ಮಲ್ಲಿ ಆಗತಕ್ಕ ಅವ್ಯವಹಾರಗಳನ್ನು ಇನ್ನೊಬ್ಬರ ಹತ್ತಿರ ತೆಗೆದುಕೊಂಡು ಹೋಗಿ ಹೇಳತಕ್ಕ ದಾಟಿ ಈ ಅಧಿಕಾರಿಗಳಲ್ಲಿ ಬೆಳೆದಿದೆ. ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಆಗಿರುವುದು ತಮಗೆ ತೋರಿಸತಕ್ಕದ್ದು, ತಮ್ಮ ಕಾಲದ್ದನ್ನು ಇನ್ನೊಬ್ಬರಿಗೆ ತೋರಿಸತಕ್ಕದ್ದು ನಡೆದಿದೆ, ಇದು ಸರಿಯಲ್ಲ, ನನ್ನ ಈ ಉಪ ಪ್ರಶ್ನೆಗೆ ತಮ್ಮ ಉತ್ತರ ನಿರೀಕ್ಷಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳು ಯಾರೇ ಇರಬಹುದು, ಅವರು ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಕಾನೂನು ಇದೆ ಎಂದು ನಾನು ಈಗಾಗಲೇ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಇಲ್ಲಿ ಹೆಸರು ಹೇಳಬಾರದೆಂದು ಅಲ್ಲ. ಹೆಸರು ಹೇಳುವುದಕ್ಕೇನು ಮುಚ್ಚುಮರೆ ಇಲ್ಲ. ವಿಚಾರಣೆ ಮಾಡುವಾಗ

ಮುಚ್ಚುಮರೆ ಏತಕ್ಕೆ? ತಮ್ಮ ಅಭಿಪ್ರಾಯವನ್ನು ಒಪ್ಪುತ್ತೇನೆ. ಯಾರ ಮೇಲೆ ವಿಚಾರಣೆ ನಡೆಯುತ್ತಿದೆ, ಏತಕ್ಕೋಸ್ಕರ ನಡೆಯುತ್ತಿದೆ ಎಂಬುದು ಗೊತ್ತಾಗುವುದು ಬಹಳ ಒಳ್ಳೆಯದು. ಅದನ್ನು ಮುಚ್ಚುಮರೆ ಮಾಡುವ ಪ್ರಶ್ನೆ ಇಲ್ಲ, ಈಗ ಕೊಟ್ಟಿರುವ ಉತ್ತರವನ್ನು ತಿದ್ದುಪಡಿ ಮಾಡುತ್ತೇನೆ. I quite agree with your suggestion that the names of the officers against whom such investigations are launched, are disclosed. ಅದು ಮಾಡಬೇಕು. ದೇಶದ ಜನರಿಗೆ ಗೊತ್ತಾಗಲಿ, ಅದೇನು ತಪ್ಪಾಗುವುದಿಲ್ಲ. ಅನಂತರ ನಾನು ಆ ಹೆಸರುಗಳು ಯಾವುವು ಎಂದು ತಿಳಿಸುತ್ತೇನೆ. ತಮ್ಮ ಪ್ರಶ್ನೆ ಇರತಕ್ಕದ್ದು ಕೆಲವು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ತಮ್ಮ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು. ಅವರು ತಮ್ಮ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂದು ನಿರ್ಧಾರವಾಗತಕ್ಕದ್ದು ನಮ್ಮ ಇಲಾಖೆಯ ತನಿಖೆಯ ಮುಖಾಂತರ ಆಗುತ್ತದೆ ಮತ್ತು ಲೋಕಾಯುಕ್ತಕ್ಕೆ ಕಂಪ್ಲೆಂಟ್ ವಗೈರೆ ಹೋಗಿದ್ದರೆ ಅವರು ವಿಚಾರಣೆ ಮಾಡಿ ಪತ್ತೆ ಮಾಡುತ್ತಾರೆ.

MR. SPEAKER : (Referring to an hon. Member who was standing) Hon'ble Chief Minister, I am entitled to see the faces of the Hon.Members and not their backs.

ಶ್ರೀ ಎಸ್. ಬಂಗಾರಪ್ಪ : ಅದೇನೇ ಇರಲಿ, ಅಧ್ಯಕ್ಷರ ಕಡೆಗೆ ಮುಖ ಮಾಡಿ ನಿಂತುಕೊಳ್ಳಬೇಕು ನಿಂತು ಕೊಳ್ಳುವುದಾದರೆ....

ಶ್ರೀ ವಾಟಾಳ್ ನಾಗರಾಜ್ : ಬಹಳ ಜನ ಮುಖ ತೋರಿಸುತ್ತಿಲ್ಲ. ಅದೇ ತಾಪತ್ರಯ ಬಂದಿರುವುದು ನಮಗೆ.

ಶ್ರೀ ಎಸ್. ಬಂಗಾರಪ್ಪ : ಈಗಾಗಲೇ ತಮಗೆ ಉತ್ತರ ತಿಳಿಸಿದ್ದೇನೆ. ತಾವೇ ಓದಿದ್ದೀರಿ. ಆರೋಪಿಗಳ ಮೇಲೆ ತನಿಖೆ ಮಾಡಿ ಎರಡು ಪ್ರಕರಣದಲ್ಲಿ ವರದಿ ಬಂದಿದೆ ಎಂಬ ಮಾತನ್ನು ನಾವು ಹೇಳಿದ್ದೇವೆ. ಇನ್ನೊಂದು ಆರೋಪ ಸಾಬೀತಾಗಿಲ್ಲವೆಂಬ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ. ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂಬ ಮಾತನ್ನು ನಾನು ಹೇಳಿದ್ದೇನೆ. ಹೆಸರು ಕೂಡ ನಾನು ತಿಳಿಸುತ್ತೇನೆ. ಆಮೇಲೆ ಐ.ಎ.ಎಸ್. ಅಧಿಕಾರಿಗಳು ಮತ್ತು ಐ.ಪಿ.ಎಸ್. ಅಧಿಕಾರಿಗಳಲ್ಲಿ ಲೋಕಾಯುಕ್ತ ವಿಚಾರಣೆಯನ್ನು ಎಷ್ಟು ಜನ ಎದುರಿಸಿದ್ದಾರೆ ಎಂದು ಹೇಳಿದ್ದೀರಿ ಇಷ್ಟೇ ಇರತಕ್ಕದ್ದು. ಒಟ್ಟು ನಾಲ್ಕು ಜನ ಇರುವವರು. ಈ ಪ್ರಕರಣವನ್ನು ಎಂದು ಲೋಕಾಯುಕ್ತಕ್ಕೆ ವಹಿಸಲಾಯಿತು ಮತ್ತು ಎಂದು ಮುಕ್ತಾಯಗೊಳ್ಳುತ್ತದೆ ಎಂದು ಕೇಳಿದ್ದೀರಿ. ಮುಕ್ತಾಯಗೊಳ್ಳುವುದನ್ನು ನಾನು ಈಗಲೇ ಹೇಳಲಾರೆ. ಏಕೆಂದರೆ it is left to Lokayutha. After all it is a statutory body. ತಮಗೆ ಗೊತ್ತಿರುವಾಹಾಗೆ ಲೋಕಾಯುಕ್ತ ಸ್ಟ್ಯಾಟ್ಯುರಿ ಬಾಡಿ ಅಲ್ಲಿ ಇರತಕ್ಕದ್ದು. ಮಾನ್ಯ ಸಭಾಧ್ಯಕ್ಷರೇ ಇಲ್ಲಿರತಕ್ಕವರು ನಾಲ್ಕು ಜನ. ಅವರೆಂದರೆ Sri Swatanata Rao, Secretary-II Commerce & Indutries, Sri B.S. Patil, Secretary - I Industries Department, Sri J Alexander, Commissioner, Finance Department and Mr. Nagaraja Shetty. 2 IPS Officers also - Sri AchyutaRao and Sri P.K. Garg. Including two police officers. Total 6. As far as IAS Officers are concerned,

known source of income ಗಿಂತ ಜಾಸ್ತಿಯಾಗಿದೆ ಎಂಬ ಕಾರಣದಿಂದಲೇ ಇವೆಲ್ಲವೂ ಇನ್‌ವೆಸ್ಟ್‌ಗೇಷನ್ ನಡೆದಿರತಕ್ಕ ವಿಚಾರ ಎಂಬ ಮಾತನ್ನು ಈಗಾಗಲೇ ಹೇಳಿದ್ದೇನೆ. ಇದರಲ್ಲಿ of the four IAS Officers, final reports have been received in respect of two cases only. The details of the two cases : ಸ್ವತಂತ್ರರಾವ್, ಸೆಕ್ರೆಟರಿ-2 ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಏನಿದ್ದಾರೆ ಅವರು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಬೇಕು ಎಂದು ಕಳುಹಿಸಿಕೊಟ್ಟಿದ್ದಾರೆ. In the light of the findings of the Lokayukta, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಬೇಕು. ಲೋಕಾಯುಕ್ತದವರು ರೆಕಮೆಂಡೇಷನ್ ಮಾಡಿ ಕಳುಹಿಸಿದ್ದಾರೆ, it is under the examination of the Government. ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. In the another case of Mr. B.S. Patil, Secretary, Industries Department, Police wing of Lokyukta has filed 'B' Report before the competent authorities. ಅವರು ಬಿ ರಿಪೋರ್ಟ್ ಕೊಟ್ಟಿದ್ದಾರೆ, since no case of any cognisance is made out ಎಂದು ತಿಳಿಸಿದ್ದಾರೆ. Under the IPC or any other Act; ಅದಿಲ್ಲ ಎಂದು ಹೇಳಿದ್ದಾರೆ. ನಾಳೆ ನಾವು ಅಂತಹ ಕೇಸ್ ಹಾಕಿದರೂ ಅದು ನಿಲ್ಲುವುದಿಲ್ಲ ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನಂತರ in respect of two other cases of IAS Officers, Sri J. Alexander, Mr. Nagaraja Shetty and two IPS Officers, Mr. Achyuta Rao Mr. Garg, final investigation reports have not been received by the government. ಅದು ಬಂದಮೇಲೆ ವರದಿಯನ್ನು ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ ನಾನು ಕೊನೆಯದಾಗಿ ಪ್ರಶ್ನೆ ಕೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಆಡಳಿತ ಸುಧಾರಣೆಗೋಸ್ಕರ ಪಂಚಸೂತ್ರದ ವಿಧೇಯಕವನ್ನು ಸಭೆಯ ಮುಂದೆ ಇಡುತ್ತಿದ್ದೀರಿ ನಾನು ಅದನ್ನು ಸ್ವಾಗತಿಸುತ್ತೇನೆ. ಇಡೀ ದೇಶದಲ್ಲಿ ಅದು ಮೊದಲನೇಯದಾಗಿ ತಂದಿದ್ದಾರೆ. ಆಡಳಿತ ಸುಧಾರಣೆ ಮಾಡಿ ಕರಪ್‌ಷನ್ ಕಡಿಮೆ ಮಾಡಬೇಕು ಎಂಬ ದೃಷ್ಟಿಯಿಂದ ತಂದಿದ್ದೀರಿ. ನಾನು ಒಂದು ಪ್ರಶ್ನೆ ಕೇಳುತ್ತೇನೆ. ಏನು ಸೋರ್ಸ್ ಆಫ್ ಇನ್‌ಕಂ ಅವರು ಡಿಕ್ಲೇರ್ ಮಾಡಿರುತ್ತಾರೆ ಯಾರೋ ಕಂಪ್ಲೆಂಟ್ ಕೊಟ್ಟು ಮಾಡುವುದರ ಬದಲು ಅವರು ಸೋರ್ಸ್ ಆಫ್ ಇನ್‌ಕಂ ಏನು ಡಿಕ್ಲೇರ್ ಮಾಡಿರುತ್ತಾರೆ ಅವರಿಗೆ ಇರತಕ್ಕ ಅಸೆಟ್ಸ್ ಏನಿದೆ ಎಂಬುದನ್ನು ಸರ್ಕಾರದವರು ನೇರವಾಗಿ ಲೋಕಾಯುಕ್ತಕ್ಕೆ ರೆಫರ್ ಮಾಡಿ ಅದನ್ನು ತನಿಖೆ ಮಾಡಿಸಿದರೆ ಡಿಸ್‌ಪ್ರೊಪೋರ್ಷನೇಟ್ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಇನ್ನೊಂದು ಏನಾಗಿದೆ ಎಂದರೆ ಬೇನಾಮಿ ಹೆಸರಿನಲ್ಲಿ ಹಣವನ್ನು ತೊಡಗಿಸಿದ್ದಾರೆ ಎಂದು ರಾಜ್ಯದ ಜನತೆ ಏನು ಮಾತನಾಡುತ್ತಿದ್ದಾರೆ ಅದು ಸಾಬೀತಾಗಬೇಕಾದರೆ ಲೋಕಾಯುಕ್ತದ ಇಂಟೆಲಿಜೆನ್ಸ್ ವಿಂಗ್ ಎನ್‌ಕ್ವೈರಿ ಮಾಡಬೇಕು. ಆ ಕೆಲಸ ಮಾಡಿ ಆ ಪದ್ಧತಿಯನ್ನು ಜಾರಿಗೆ ತರುತ್ತೀರಾ ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ಅಭಿಪ್ರಾಯವನ್ನು ನಾನು ಗ್ರಹಿಸುತ್ತೇನೆ. ಒಂದು ಅರ್ಥದಲ್ಲಿ ಈಗಿರತಕ್ಕ ಪ್ರೊಸಿಜರ್ ಏನು ಇದೆ ಯಾರೇ ಒಬ್ಬ ಅಧಿಕಾರಿ ಹೆಚ್ಚು ಹಣವನ್ನು ಗಳಿಸಿಕೊಂಡ ಎಂದು ಇಟ್ಟುಕೊಳ್ಳೋಣ ಯಾರೇ ಕಂಪ್ಲೆಂಟ್ ಕೊಟ್ಟೇ ಅದನ್ನು ನೋಡಬೇಕು ಎನ್ನುವ

ಅಭಿಪ್ರಾಯವನ್ನು ಒಪ್ಪಿಕೊಂಡು ಹೋದರೆ ಯಾವುದೇ ಕಂಪ್ಲೆಂಟ್ ಇಲ್ಲದೇ ಇದ್ದರೆ ಮಾಡಬಹುದು ಎನ್ನುವ ತೀರ್ಮಾನವನ್ನು ನಾವು ಮಾಡಬೇಕಾಗುತ್ತದೆ. There I agree with your suggestion.

ಈಗ ನಮ್ಮಲ್ಲಿ ಇರತಕ್ಕ ರೂಲ್ಸ್ ಪ್ರಕಾರ ಅವರು ಏನೇನು ಡಿಕ್ಲೇರ್ ಮಾಡಬೇಕೋ ಅದನ್ನು ಡಿಕ್ಲೇರ್ ಮಾಡಿರತಕ್ಕ ವಿಚಾರದಲ್ಲಿ ಅದು ಸರಿಯಲ್ಲ ಎಂದು ಕಂಡುಬಂದರೆ ಆ ಬಗ್ಗೆ ಕಾರ್ಯ ತೆಗೆದುಕೊಳ್ಳುವುದು ಒಂದು. ಮತ್ತೊಂದು ಅವರು ಎಷ್ಟು ನಿಜ ಕೊಟ್ಟಿದ್ದಾರೆಯೇ ಅಥವಾ ಸುಳ್ಳು ಕೊಟ್ಟಿದ್ದಾರೆಂದು ನೋಡುವುದಕ್ಕೂ ಕೂಡ ಈಗಿರತಕ್ಕ ಕಾನೂನಿನಲ್ಲಿ ಅಡಕವಾಗಿದೆ. ಅದರ ಪ್ರಕಾರ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆ

ಅಜ್ಜಂಪುರ ಸರ್ಕಾರದ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಕಟ್ಟಿಸುವ ಬಗ್ಗೆ

2818 - ಡಾ. ಹೆಚ್.ಆರ್. ರಾಜು (ತರೀಕೆರೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಅಜ್ಜಂಪುರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ಇದನ್ನು ಆಯವ್ಯಯದಲ್ಲಿ ಸೇರಿಸದೆ ಬಿಡಲಾಗಿದೆ?

ಇ) ಇಲ್ಲಿನ ಮಧ್ಯಂತರ ಮಂಡಲ್ ಪಂಚಾಯಿತಿಯವರು ಕಾಲೇಜಿನ ಕಟ್ಟಡಕ್ಕಾಗಿ ನಿವೇಶನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಕ್ಕಾಗಿ 1991-92ನೇ ಸಾಲಿನ ಯೋಜನೆಯಡಿ ಒದಗಿಸಿದ ಹಣ ರೂ 150.00 ಲಕ್ಷಗಳು ಮಾತ್ರ ಆ 64 ಸರ್ಕಾರಿ ಕಾಲೇಜುಗಳಿಗೆ ಸ್ವಂತ ಕಟ್ಟಡ ಒದಗಿಸುವ ಅವಶ್ಯಕತೆ ಇದೆ. ಆದುದರಿಂದ ನಿರ್ಮಾಣ ಕಾರ್ಯವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. 1991-92ನೇ ಸಾಲಿನಲ್ಲಿ 12 ಹೊಸ ಕಾಮಗಾರಿಗಳನ್ನು ಮಾತ್ರ ಪರಿಗಣಿಸಲು ಸಾಧ್ಯವಾಯಿತು.

ಆದಾಗ್ಯೂ ಈ ಕಾರ್ಯವನ್ನು 1992-93ನೇ ಸಾಲಿನಲ್ಲಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಪರಿಶೀಲಿಸಲಾಗುವುದು.

ಇ) ಕಾಲೇಜಿನ ಕಟ್ಟಡಕ್ಕಾಗಿ ಮಧ್ಯಂತರ ಮಂಡಲ ಪಂಚಾಯಿತಿಯಿಂದ 2.5 ಎಕರೆ ಜಮೀನನ್ನು ನೀಡಲಾಗಿದೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರವೇಳೆ ಮುಗಿಯಿತು. ಈಗ ಚುಕ್ಕೆಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು.